ಓ ಎಸ್ ನಂಃ 29/2016

ಪಿ. ಡಬ್ಲ್ಯೂ ಃ 3

**ದಿಃ 22.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಎ ಎಸ್ ಎಸ್ ವಕೀಲರಿಂದ ಃ**

ನನಗೆ ಸಾಕ್ಷಿ ಹೇಳಲು ನ್ಯಾಯಾಲಯದಿಂದ ಸಮನ್ಸ ಬಂದಿತ್ತು. ಆ ಸಮನ್ಸ ಮನೆಯಲ್ಲಿದೆ. ಸಮನ್ಸನ್ನು ವಾದಿ ಕಳುಹಿಸಿದ್ದರು. ಕೇಸ್‌ನ ದಿನಾಂಕವನ್ನು ನನಗೆ ವಾದಿಯೇ ಕಳುಹಿಸಿದ್ದಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿರುವ ವಿಷಯವನ್ನು ವಾದಿಯೇ ಹೇಳಿ ಬರೆಯಿಸಿದ್ದಾರೆ. ಯಾವ ದಾಖಲೆಯಲ್ಲಿ ನಮ್ಮ ತಂದೆ ಸಹಿ ಮಾಡಿದ್ದರು ಎಂದು ನನ್ನ ಮುಖ್ಯ ವಿಚಾರಣೆಯಲ್ಲಿ ವಾದಿ ಬರೆಯಿಸಿದ್ದಾರೆ. ನನ್ನ ತಂದೆ ಸಹಿ ಇರುವ ಬೇರೆ ದಾಖಲೆಗಳು ನಮ್ಮ ಮನೆಯಲ್ಲಿ ಇಲ್ಲ. ನನ್ನ ತಂದೆಯನ್ನು ನಾನು ನೋಡಿದ್ದರಿಂದ ಅದನ್ನು ಗುರುತಿಸುತ್ತೇನೆ. ನಮ್ಮ ತಂದೆ ಎಲ್ಲ ದಾಖಲೆಗಳಲ್ಲಿ ಸಹಿ ಮಾಡಿದ್ದನ್ನು ನಾನು ನೋಡಿ ನಮ್ಮ ತಂದೆಯನ್ನು ಗುರುತಿಸಿದ್ದೇನೆ. ನಾನು ನಮ್ಮ ತಂದೆ ಸಹಿಯನ್ನು ಫೋರ್ಜರಿ ಮಾಡಿದ್ದೇನೆಂದರೆ ಸರಿಯಲ್ಲ. ಆ ಕಾರಣದಿಂದ ಅದಕ್ಕೆ ಸಂಬಂಧಿಸಿದ ಯಾವುದೆ ದಾಖಲೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದಿಗಳ ಜೊತೆ ಶಾಮೀಲಾಗಿ ವಾದಿಗಳು ಸೃಷ್ಟಿಸಿದ ದಾಖಲೆಗಳಿಗೆ ಪೂರಕವಾಗಿ ಸಹಿ ನಮ್ಮ ತಂದೆಯದ್ದು ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಮಾತು ಕೇಳಿ ಅವರು ಹೇಳಿಕೊಟ್ಟಂತೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.

ಓ ಎಸ್ ನಂಃ 29/2016

ಪಿ. ಡಬ್ಲ್ಯೂ ಃ 2

**ದಿಃ 22.09.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಎ ಎಸ್ ಎಸ್ ವಕೀಲರಿಂದ ಃ**

ಸಾಕ್ಷಿ ಹೇಳಲು ನನಗೆ ನ್ಯಾಯಾಲಯದಿಂದ ಸಮನ್ಸ ಬಂದಿಲ್ಲ. ಸಾಕ್ಷಿ ಹೇಳಲು ನನಗೆ ವಾದಿ ಕೇಳಿಕೊಂಡಿದ್ದರು. ವಾದಿ ನನ್ನ ತಂಗಿಯ ಗಂಡನಾಗಬೇಕು. ನನ್ನ ತಂಗಿಯ ಹೆಸರು ದ್ರಾಕ್ಷಾಯಣಮ್ಮ ಇರುತ್ತದೆ. ಮುಖ್ಯ ವಿಚಾರಣೆಗೆ ನಾನೇ ಮಾಹಿತಿ ಕೊಟ್ಟಿದ್ದೇನೆ. ನಮ್ಮ ಚಿಕ್ಕ ತಾತ, ಚಿಕ್ಕ ಅಜ್ಜಿ ಮತ್ತು ದೊಡ್ಡ ಅಜ್ಜಿಯ ಹೆಬ್ಬೆಟ್ಟಿನ ರುಜುಗಳನ್ನು ಯಾವ ದಾಖಲೆಗಳನ್ನು ನೋಡಿ ಗುರುತಿಸುತ್ತೇನೆ ಎಂದು ಮುಖ್ಯ ವಿಚಾರಣೆಯಲ್ಲಿ ಹೇಳಿಲ್ಲ ಎಂದರೆ ಸರಿ. ನಮ್ಮ ಚಿಕ್ಕ ತಾತ, ಚಿಕ್ಕ ಅಜ್ಜಿ ಮತ್ತು ದೊಡ್ಡ ಅಜ್ಜಿಯ ಹೆಬ್ಬೆಟ್ಟಿನ ರುಜುಗಳನ್ನು ಇವುಗಳನ್ನು ಬೇರೆ ಯಾವುದೆ ದಾಖಲೆಯಲ್ಲಿ ನೋಡಿಲ್ಲ. ಆದರೆ ನಾನು ಚಿಕ್ಕವನಿದ್ದಾಗ ಪಾಲನಹಳ್ಳಿಗೆ ಬರುತ್ತಿದ್ದಾಗ ಅವರು ನಮ್ಮ ಚಿಕ್ಕ ಅಜ್ಜಿ ಮತ್ತು ಚಿಕ್ಕ ತಾತ ಸಹಿ ಮಾಡುತ್ತಿದ್ದದ್ದನ್ನು ನಾನು ನೋಡಿದ್ದೇನೆ. ನಮ್ಮ ಚಿಕ್ಕ ಅಜ್ಜಿ ಮತ್ತು ಚಿಕ್ಕ ತಾತ ಏನು ವಿದ್ಯಾಭ್ಯಾಸ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ವಾದಿ ತನ್ನ ಹೆಂಡತಿಗೆ ಬರೆದುಕೊಟ್ಟ ದಾನಪತ್ರಕ್ಕೆ ಪೂರಕವಾಗಿ ಒಂದು ಸೃಷ್ಟಿತ ವಿಭಾಗಪತ್ರದಲ್ಲಿ ಇರುವ ಸಹಿಗಳನ್ನು ಗುರುತಿಸುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಇನ್ನೊಬ್ಬ ಸಾಕ್ಷಿದಾರರಾದ ಈಶ್ವರಯ್ಯ ಮತ್ತು ನನ್ನ ಬಾಮೈದ ಚಂದ್ರಶೇಖರಯ್ಯ ಮತ್ತು ನನ್ನ ತಂಗಿ ದ್ರಾಕ್ಷಾಯಣಮ್ಮ ಸೇರಿ ದಾಖಲೆಯನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಒಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

**(ಉಕ್ತಿ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**